# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1862 (2174) |
| ಸದಸ್ಯರ ಹೆಸರು | : | ಶ್ರೀ ಆರ್ ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾಗಿದ್ದ ದಿನಾಂಕ | : | 31-03-2020 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ ಯಾರ ಸಲಹೆ ಮೇರೆಗೆ ಕಾಮಗಾರಿ ಕೈಗೊಳ್ಳಲಾಗುತ್ತಿದೆ; ಸ್ಥಳೀಯ ಚುನಾಯಿತ ವಾರ್ಡ್ ಸದಸ್ಯರ ಗಮನಕ್ಕೆ ತರದೇ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆಯೇ; ಈ ಬಗ್ಗೆ ಸ್ಥಳೀಯ ಸಂಸ್ಥೆಯ ಜೊತೆ ಚರ್ಚಿಸಲಾಗಿದೆಯೇ; (ವಿವರ ನೀಡುವುದು) | ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು, ದಿನಾಂಕ:25-06-2015ರಂದು ಸ್ಮಾರ್ಟ್ ಸಿಟಿಗಳ ಅಭಿಯಾನಕ್ಕೆ ಚಾಲನೆ ನೀಡಿರುತ್ತದೆ. ನಗರಗಳು ಸದರಿ ಅಭಿಯಾನದಡಿ ಅಭಿವೃದ್ಧಿ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ, ಸ್ಪರ್ಧೆಯ ಮುಖಾಂತರ ಆಯ್ಕೆಯಾಗಿರುತ್ತವೆ. ಮಾರ್ಗಸೂಚಿಗಳನುಸಾರ ಈ ಅಭಿವೃದ್ಧಿ ಪ್ರಸ್ತಾವನೆಗಳನ್ನು ಸಾರ್ವಜನಿಕ ಸಮಾಲೋಚನೆಯೊಂದಿಗೆ ಸಿದ್ಧಪಡಿಸಬೇಕಾಗಿದ್ದು, ಸಾರ್ವಜನಿಕ ಸಮಾಲೋಚನೆಗೆ 100 ರಲ್ಲಿ 16 ಅಂಕಗಳು ನಿಗಧಿಯಾಗಿರುತ್ತದೆ.<br><br>ರಾಜ್ಯದ ಎಲ್ಲಾ ನಗರಗಳು ಚುನಾಯಿತ ಪ್ರತಿನಿಧಿಗಳೊಂದಿಗೆ, ಸಾರ್ವಜನಿಕರೊಂದಿಗೆ ವಿವಿಧ ಕ್ಷೇತ್ರಗಳಲ್ಲಿ ಪರಿಣಿತಿ ಹೊಂದಿರುವ ಸಂಘ ಸಂಸ್ಥೆಗಳು/ಶಿಕ್ಷಣ ಸಂಸ್ಥೆಗಳು ಮತ್ತು ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞರೊಂದಿಗೆ ಹಾಗೂ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಮಾಲೋಚಿಸಿದ ನಂತರ ಪ್ರಸ್ತಾವನೆಗಳನ್ನು ಸಿದ್ಧಪಡಿಸಿರುತ್ತವೆ. ಎಲ್ಲಾ ನಗರಗಳಲ್ಲಿ ಸಭೆಗಳನ್ನು ನಡೆಸಿ, ಮಾಧ್ಯಮಗಳಲ್ಲಿ ಜಾಹೀರಾತು ನೀಡಿ, ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಿ, ಮೊಬೈಲ್ ಆಪ್‌ಗಳ ಮುಖಾಂತರ ಸಮಾಲೋಚಿಸಿ, ಸ್ಮಾರ್ಟ್ ಸಿಟಿ ಪ್ರಸ್ತಾವನೆಯನ್ನು ತಯಾರಿಸಲಾಗಿದೆ.<br><br>ಇಂತಹ ಪ್ರಸ್ತಾವನೆಗಳಿಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳ ಕೌನ್ಸಿಲ್ ಸಭೆಗಳು ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿರುತ್ತವೆ. ಕೇಂದ್ರ ಹಾಗೂ ರಾಜ್ಯ ಸರ್ಕಾರವು ಈ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿದ್ದು, ನಂತರದಲ್ಲಿ ಆದ್ಯತೆ ಮೇರೆಗೆ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.<br><br>ಮುಂದುವರೆದು, ಎಲ್ಲಾ ನಗರಗಳಲ್ಲಿ ಲೋಕಸಭಾ ಸದಸ್ಯರು, ವಿಧಾನ ಸಭಾ ಸದಸ್ಯರು, ಮಹಾಪೌರರು, ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ಸ್ಮಾರ್ಟ್ ಸಿಟಿ ಲಿಮಿಟೆಡ್, ತಾಂತ್ರಿಕ ತಜ್ಞರು, ವಾಣಿಜ್ಯ ಮಂಡಳಿಯ ಸದಸ್ಯರು, ಸ್ವಯಂ ಸೇವಾ ಸಂಸ್ಥೆ ಸದಸ್ಯರು ಹಾಗೂ ಇತರೆ ಸಂಸ್ಥೆಗಳ ಪ್ರತಿನಿಧಿಗಳನ್ನು ಒಳಗೊಂಡಿರುವ "ನಗರ ಮಟ್ಟದ ಸಲಹಾ ಸಮಿತಿ" (City Level Advisory Forum) ಗಳನ್ನು ರಚಿಸಲಾಗಿದ್ದು, ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಲು ಹಾಗೂ ಅನುಷ್ಠಾನಗೊಳಿಸಲು, ಈ CLAF ಗಳು ಮಾರ್ಗದರ್ಶನ ನೀಡುತ್ತಿವೆ.<br><br>ಅಲ್ಲದೇ, ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ವಿಶೇಷ ಉದ್ದೇಶಿತ ವಾಹನಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನಕ್ಕಾಗಿ ಪ್ರತಿ ನಗರದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ "ಸ್ಮಾರ್ಟ್ |

<table>
<tr><td></td><td></td><td>ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿಯನ್ನು" ರಚಿಸಲಾಗಿದೆ. ಈ ಸಮಿತಿಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸಹ-ಅಧ್ಯಕ್ಷರಾಗಿದ್ದು, ಸಂಸತ್ ಸದಸ್ಯರು, ರಾಜ್ಯ ವಿಧಾನ ಸಭಾ ಸದಸ್ಯರು, ಮಹಾ ಪೌರರು, ಜಿಲ್ಲಾಧಿಕಾರಿಗಳು, ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕರು, ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ, ಆಯುಕ್ತರು-ಮಹಾನಗರ ಪಾಲಿಕೆ, ಆಯಕ್ತರು-ನಗರಾಭಿವೃದ್ಧಿ ಪ್ರಾಧಿಕಾರ ಇವರು ಸದಸ್ಯರುಗಳಾಗಿದ್ದು, ಆಯಾಯ ನಗರದ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರು ಸದಸ್ಯ ಸಂಚಾಲಕರಾಗಿರುತ್ತಾರೆ.<br><br>ಯೋಜನಾ ಅನುಷ್ಠಾನದಲ್ಲಿ ಎದುರಾಗುವ ಅನೇಕ ಸಮಸ್ಯೆಗಳಿಗೆ 'ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ' ಮತ್ತು 'ಸ್ಮಾರ್ಟ್ ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿಗಳಲ್ಲಿ' ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ.</td></tr>
<tr><td>ಆ</td><td>ಸ್ಮಾರ್ಟ್ ಸಿಟಿ ಕಂಪನಿಯ ಆಡಳಿತ ವ್ಯವಸ್ಥೆಗೆ ಒಂದು ಕಂಪನಿಗೆ ತಿಂಗಳೊಂದಕ್ಕೆ ತಗಲುವ ವೆಚ್ಚವೆಷ್ಟು; (ವಿವರ ನೀಡುವುದು)</td><td>ಸ್ಮಾರ್ಟ್ ಸಿಟಿ ಕಂಪನಿಗಳ ಸ್ಥಾಪನೆಯಾದ ದಿನಾಂಕದಿಂದ ಇಲ್ಲಿಯವರೆಗೆ (ದಿನಾಂಕ:29.02.2020) ಆದ ಒಟ್ಟು ಆಡಳಿತಾತ್ಮಕ ವೆಚ್ಚದ ವಿವರಗಳು ಈ ಕೆಳಕಂಡಂತಿವೆ;<br>
<table>
<tr><th>ಕ್ರ.ಸಂ</th><th>ಸ್ಮಾರ್ಟ್ ಸಿಟಿ</th><th>ಕಂಪನಿ ಸ್ಥಾಪನೆ ದಿನಾಂಕ</th><th>ಒಟ್ಟು ಆಡಳಿತಾತ್ಮಕ ವೆಚ್ಚ (ರೂ. ಕೋಟಿಗಳಲ್ಲಿ)</th></tr>
<tr><td>1</td><td>ಬೆಳಗಾವಿ</td><td>11.05.2016</td><td>15.82</td></tr>
<tr><td>2</td><td>ದಾವಣಗೆರೆ</td><td>19.05.2016</td><td>24.48</td></tr>
<tr><td>3</td><td>ಹುಬ್ಬಳ್ಳಿ-ಧಾರವಾಡ</td><td>10.03.2017</td><td>16.92</td></tr>
<tr><td>4</td><td>ಮಂಗಳೂರು</td><td>06.04.2017</td><td>12.52</td></tr>
<tr><td>5</td><td>ಶಿವಮೊಗ್ಗ</td><td>07.02.2017</td><td>13.41</td></tr>
<tr><td>6</td><td>ತುಮಕೂರು</td><td>06.02.2017</td><td>19.40</td></tr>
<tr><td>7</td><td>ಬೆಂಗಳೂರು</td><td>03.01.2018</td><td>10.60</td></tr>
<tr><td colspan="3">ಒಟ್ಟು ಆಡಳಿತಾತ್ಮಕ ವೆಚ್ಚ</td><td>113.15</td></tr>
</table>
ಸ್ಮಾರ್ಟ್ ಸಿಟಿ ಕಂಪನಿಗಳ ಆಡಳಿತಾತ್ಮಕ ವೆಚ್ಚಗಳು ಆಯಾ ಕಂಪನಿ ಸಿಬ್ಬಂದಿಗಳ ಸಂಖ್ಯೆ, ಕಟ್ಟಡಗಳ ಬಾಡಿಗೆ, ಯೋಜನಾ ಸಮಾಲೋಚಕರ ವೆಚ್ಚ ಹೀಗೆ ಹಲವಾರು ಅಂಶಗಳ ಮೇಲೆ ನಿರ್ಧಾರವಾಗಿರುತ್ತವೆ. ಇದರ ಅನುಸಾರ ಪ್ರತಿ ವಿಶೇಷ ಉದ್ದೇಶಿತ ವಾಹನದ ಆಡಳಿತ ವ್ಯವಸ್ಥೆಗೆ ಸರಾಸರಿ ಮಾಹೆಯಾನ ಅಂದಾಜು ರೂ.42.00 ಲಕ್ಷ ವೆಚ್ಚವಾಗುತ್ತಿರುತ್ತದೆ.</td></tr>
<tr><td>ಇ</td><td>ಶಿವಮೊಗ್ಗ ಮಹಾನಗರ ಪಾಲಿಕೆ ಸ್ಮಾರ್ಟ್ -ಸಿಟಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; ಕೈಗೊಂಡ ಕಾಮಗಾರಿಗಳು ಯಾವುವು;</td><td>ಸ್ಮಾರ್ಟ್ ಸಿಟಿ ಅಭಿಯಾನದಡಿ ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್‌ಗೆ ಕೇಂದ್ರ ಸರ್ಕಾರದಿಂದ ಈವರೆಗೆ ರೂ.196.00 ಕೋಟಿ ಮತ್ತು ರಾಜ್ಯ ಸರ್ಕಾರದಿಂದ ರೂ.111.00 ಕೋಟಿಯಂತೆ ಒಟ್ಟು ರೂ.307.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ.<br><br>ಶಿವಮೊಗ್ಗ ಸ್ಮಾರ್ಟ್ ಸಿಟಿ ಲಿಮಿಟೆಡ್‌ನಲ್ಲಿ ಅನುಷ್ಠಾನಗೊಳಸುತ್ತಿರುವ ಕಾಮಗಾರಿಗಳ ವಿವರಗಳನ್ನು <u>ಅನುಬಂಧದಲ್ಲಿ</u> ನೀಡಿದೆ.</td></tr>
<tr><td>ಈ</td><td>ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಕಾಮಗಾರಿಗಳು ಮಂದಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>• ಸ್ಮಾರ್ಟ್ ಸಿಟಿ ಅಭಿಯಾನವು ಇತರೆ ಯೋಜನೆಗಳಿಂದ ಭಿನ್ನವಾಗಿದ್ದು, ಹಲವು ಹೊಸ ರೀತಿಯ ನಿಯಮಾವಳಿಗಳ ರಚನೆ ಹಾಗೂ ಆಚರಣೆ ಅಗತ್ಯವಾಗಿರುತ್ತದೆ. ವಿಶೇಷ ಉದ್ದೇಶಿತ ವಾಹನಗಳ ಸ್ವಾಯತ್ತತೆ ಮತ್ತು ಸ್ವತಂತ್ರ ಕಾರ್ಯಾಚರಣೆಗಳಿಗಾಗಿ ಸರ್ಕಾರವು ಅಭಿಯಾನದ ಮಾರ್ಗಸೂಚಿಯಂತೆ ವಿಶೇಷವಾದ</td></tr>
</table>

ಅಧಿಕಾರವನ್ನು ಪ್ರತ್ಯಾಯೋಜಿಸಿರುತ್ತದೆ. ಈ ರೀತಿ ಅಧಿಕಾರ ಪ್ರತ್ಯಾಯೋಜನೆಯು ವಿನೂತನ ಪ್ರಯೋಗವಾಗಿದ್ದು, ಇದಕ್ಕಾಗಿಯೂ ಹೆಚ್ಚಿನ ಕಾಲಾವಕಾಶ ಹಿಡಿದಿರುತ್ತದೆ.

- ಸ್ಮಾರ್ಟ್ ಸಿಟಿ ಪ್ರಸ್ತಾವನೆಯಲ್ಲಿರುವ ಯೋಜನೆಗಳಿಗೆ ಪರಿಕಲ್ಪನಾ ವರದಿ ಹಾಗೂ ವಿಸ್ತೃತಾ ಯೋಜನಾ ವರದಿಗಳನ್ನು ತಯಾರಿಸಲು ಸಾಕಷ್ಟು ಕಾಲಾವಧಿಯು ಹಿಡಿದಿರುತ್ತದೆ.
- ನೂತನವಾಗಿ ಸ್ಥಾಪಿಸಲಾಗಿರುವ ವಿಶೇಷ ಉದ್ದೇಶಿತ ವಾಹನಗಳಿಗೆ ಮಾನವ ಸಂಪನ್ಮೂಲ ನೇಮಕಾತಿಗೂ ಹೆಚ್ಚಿನ ಕಾಲಾವಧಿ ಹಿಡಿದಿರುತ್ತದೆ.
- ಯೋಜನೆಯಡಿ ಪ್ರಮುಖವಾಗಿ ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ, ಒಳಚರಂಡಿ ಹಾಗೂ ಇನ್ನಿತರೆ ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದ್ದು, ಸದರಿ ಯೋಜನೆಗಳನ್ನು ನಗರದ ಜನನಿಬಿಡ ಪ್ರದೇಶಗಳಲ್ಲಿ ಅನುಷ್ಠಾನಗೊಳಸಬೇಕಾಗಿದ್ದು, ಸ್ಥಳೀಯವಾಗಿ ಬಹಳ ಸಮಸ್ಯೆಗಳನ್ನು ಎದುರಿಸಬೇಕಾಗಿರುತ್ತದೆ. ಅಲ್ಲದೇ ಈ ಯೋಜನೆಗಳಲ್ಲಿ ಬೆಸ್ಕಾಂ, ಬಿಎಸ್ಎನ್ಎಲ್, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳ ಯುಟಿಲಿಟಿ ಶಿಫ್ಟಿಂಗ್ ಅವಶ್ಯಕತೆಯಿದ್ದು, ಇದರಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗುತ್ತಿದೆ.
- ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ ಯೋಜನೆಯಲ್ಲಿ ಲೋಕೋಪಯೋಗಿ ಇಲಾಖೆ, ಎಸ್ಕಾಂ, ನೀರು ಸರಬರಾಜು ಮಂಡಳಿ ಹಾಗೂ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕೆಲಸ ನಿರ್ವಹಿಸಲು ಹೆಚ್ಚಿನ ಸಮಯ ಅವಶ್ಯವಿರುತ್ತದೆ.
- ಬೆಳಗಾವಿ ನಗರದಲ್ಲಿ ಸ್ಮಾರ್ಟ್ ರಸ್ತೆ, ಕೇಂದ್ರ ನಗರ ಬಸ್‌ನಿಲ್ದಾಣ ಹಾಗೂ ಇತರೆ ಯೋಜನೆಗಳನ್ನು ಅನಷ್ಠಾನಗೊಳಿಸಲು ಕೇಂದ್ರ ರಕ್ಷಣಾ ಇಲಾಖೆಯಿಂದ ನಿರಾಕ್ಷೇಪಣೆ ಪತ್ರದ ಅವಶ್ಯಕತೆವಿದ್ದು ಸಂಬಂಧಿತ ಒಪ್ಪಿಗೆಗಳನ್ನು ಪಡೆಯುವಲ್ಲಿಯೂ ಸಹ ವಿಳಂಬವಾಗಿರುತ್ತದೆ. ಬಹುಉಪಯೋಗಿ ವಾಣಿಜ್ಯ ಕೇಂದ್ರ ಅಭಿವೃದ್ಧಿ ಟಿಳಕವಾಡಿ, ಯೋಜನೆಯಲ್ಲಿ ನ್ಯಾಯಾಲಯದ ವ್ಯಾಜ್ಯ ಇರುವುದರಿಂದ ಕೂಡಾ ಯೋಜನಾ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.
- ಶಿವಮೊಗ್ಗದ ನದಿ ಪ್ರದೇಶ ಮತ್ತು ಮಂಗಳೂರಿನ ಸಮುದ್ರ ಕಿನಾರೆ ಮುಂದಿನ ಪ್ರದೇಶದ ಅಭಿವೃದ್ಧಿ, ಹುಬ್ಬಳ್ಳಿ-ಧಾರವಾಡ ಮತ್ತು ಮಂಗಳೂರಿನಲ್ಲಿ ಮಾರುಕಟ್ಟೆಗಳ ನವೀಕರಣ/ನಿರ್ಮಾಣ, ಕ್ರೀಡಾಂಗಣಗಳ ಅಭಿವೃದ್ಧಿಯಂತಹ ಹಲವು ವಿನೂತನ ಯೋಜನೆಗಳಿಗೆ ಹೆಚ್ಚಿನ ನಾಗರಿಕ ಸಮಾಲೋಚನೆ ಅವಶ್ಯಕತೆ ಇದ್ದು, ವಿಸ್ತೃತಾ ಯೋಜನಾ ವರದಿಗಳನ್ನು ಅಂತಿಮಗೊಳಿಸುವ ಕಾರ್ಯಕ್ಕೆ ಹೆಚ್ಚಿನ ಸಮಯಾವಕಾಶ ಹಿಡಿದಿರುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಎದುರಾಗಿರುವ ಮೇಲಿನ ಸವಾಲುಗಳಿಗೆ ಸೂಕ್ತ ಪರಿಹಾರಗಳನ್ನು ಕಂಡುಕೊಂಡು ಈಗ ಕಾಮಗಾರಿಗಳನ್ನು ತ್ವರಿತವಾಗಿ ಅನುಷ್ಠಾನಗೊಳಸಲಾಗುತ್ತಿದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು,

ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ ಮತ್ತು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುತ್ತಿದೆ.

ಯೋಜನಾ ಅನುಷ್ಠಾನದಲ್ಲಿ ಎದುರಾಗುವ ಅನೇಕ ಸಮಸ್ಯೆಗಳಿಗೆ 'ಸ್ಮಾರ್ಟ್ ಸಿಟಿ ಅಡ್ವೈಸರಿ ಫೋರಂ' ಮತ್ತು '**ಸ್ಮಾರ್ಟ್** ಸಿಟಿ ಅನುಷ್ಠಾನ ಮತ್ತು ಪರಿಶೀಲನಾ ಸಮಿತಿಗಳಲ್ಲಿ' ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ ಹಾಗೂ ಈ ಸಮಿತಿಗಳ ಸಭೆಗಳನ್ನು ನಿಯಮಿತವಾಗಿ ನಡೆಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಮೇಲಿನ ಎಲ್ಲಾ ಕ್ರಮಗಳ ಪರಿಣಾಮವಾಗಿ, ಪ್ರಸ್ತುತ ಸ್ಮಾರ್ಟ್ ಸಿಟಿ ಅನುದಾನ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಈವರೆಗೆ ಸಾಧಿಸಿರುವ ಭೌತಿಕ ಪ್ರಗತಿ ಕೆಳಕಂಡಂತಿದೆ;

(ರೂ. ಕೋಟಿಗಳಲ್ಲಿ)

| ಕಾಮಗಾರಿಗಳ ವಿವರ | ಸಂಖ್ಯೆ | ಮೊತ್ತ |
|---|---|---|
| ಪೂರ್ಣಗೊಂಡ ಕಾಮಗಾರಿಗಳು | 92 | 146.88 |
| ಪ್ರಗತಿಯಲ್ಲಿರುವ ಕಾಮಗಾರಿಗಳು | 292 | 5318.24 |
| ಟೆಂಡರ್ ಹಂತದಲ್ಲಿರುವ ಕಾಮಗಾರಿಗಳು | 72 | 1447.78 |
| ವಿಸ್ತೃತಾ ಯೋಜನಾ ವರದಿ ಹಂತದಲ್ಲಿರುವ ಕಾಮಗಾರಿಗಳು | 62 | 2079.25 |

ಮೇಲೆ ವಿವರಿಸಿರುವ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ, ಸ್ಮಾರ್ಟ್ ಸಿಟಿ ಯೋಜನೆಯು ಸಮರ್ಪಕವಾಗಿ ನಡೆಯುತ್ತಿದ್ದು ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಲು ಎಲ್ಲಾ 7 ಸ್ಮಾರ್ಟ್ ಸಿಟಿಗಳಿಗೆ ಕಟ್ಟು ನಿಟ್ಟಿನ ಸೂಚನೆ ನೀಡಲಾಗಿದೆ.

ಉ ಬಂದಿದ್ದಲ್ಲಿ, ಇದುವರೆಗೂ ಈ ಯೋಜನೆಯಡಿಯಲ್ಲಿ ಎಷ್ಟು ಹಣ ಖರ್ಚಾಗಿರುತ್ತದೆ?

ಸ್ಮಾರ್ಟ್ ಸಿಟಿ ಅಭಿಯಾನದಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಈವರೆಗೆ ಬಿಡುಗಡೆಯಾದ ಅನುದಾನ ಹಾಗೂ ಇಲ್ಲಿಯವರೆಗೆ ಸಾಧಿಸಿರುವ ಆರ್ಥಿಕ ಪ್ರಗತಿಯ ವಿವರ ಈ ಕೆಳಗಿನಂತಿವೆ:

**(ರೂ. ಕೋಟಿಗಳಲ್ಲಿ)**

| ಕ್ರ.ಸ. | ನಗರಗಳು | ಬಿಡುಗಡೆಯಾದ ಮೊತ್ತ | | | ಇಲ್ಲಿಯವರೆಗೆ ಖರ್ಚಾದ ಮೊತ್ತ (ಫೆಬ್ರವರಿ-2020) |
|---|---|---|---|---|---|
| | | ಕೇಂದ್ರ | ರಾಜ್ಯ | ಒಟ್ಟು | |
| 1 | ಬೆಳಗಾವಿ | 196 | 200 | 396 | 170.35 |
| 2 | ದಾವಣಗೆರೆ | 196 | 200 | 396 | 157.87 |
| 3 | ಹುಬ್ಬಳ್ಳಿ-ಧಾರವಾಡ | 196 | 190 | 386 | 82.95 |
| 4 | ಮಂಗಳೂರು | 190 | 111 | 301 | 55.98 |
| 5 | ಶಿವಮೊಗ್ಗ | 196 | 111 | 307 | 100.41 |
| 6 | ತುಮಕೂರು | 196 | 111 | 307 | 179.55 |
| 7 | ಬೆಂಗಳೂರು | 155 | 55 | 210 | 13.63 |
| | ಒಟ್ಟು | 1325 | 978 | 2303 | 760.74 |

ಸಂಖ್ಯೆ: ನಅಇ 169 ಸಿಎಸ್‌ಎಸ್ 2020

(ಬಿ.ಎ.ಬಸವರಾಜ)
ಮಾನ್ಯ ನಗರಾಭಿವೃದ್ಧಿ ಸಚಿವರು.

ಅನುಬಂಧ

# Shivamogga Smart City Limited

SCM funded- Completed/Work in Progress/Work Order Issued/Tendered/DPR Stage

## SCM-Projects Completed

| S.No | Name of the work | Cost as per SCP (Rs Cr) | Work Order Cost (Rs Cr) | Status of Projects |
|---|---|---|---|---|
| 1 | Development of Tank mohalla park ( No 7) in Shivamogga | 0.45 | 0.46 | Completed (Savings Rs. 0.05 cr) |
| 2 | Providing infrastructure for development of smart library | 0.22 | 0.21 | Completed (Savings Rs. 0.03 cr) |
| 3 | Development of SMART LIBRARY ICT interventions 4 libraries and 11 School | 4.96 | 4.38 | Work Completed on 17.12.19 |
| 4 | Development of Vinayaka Park | 0.60 | 0.59 | Work Completed on 07.01.20 |
| 5 | Development of Family Welfare Park | 1.93 | 1.72 | Work Completed on 13.02.20 |
| | Sub Toatal - A in cr= | 8.16 | 7.36 | |

## SCM-Projects Ongoing (Work in Progress/Work Order/LOA Issued)

| S.No | Name of the work | Cost as per SCP (Rs Cr) | LOA/Work Order Cost (Rs Cr Including GST) | Status of Project |
|---|---|---|---|---|
| 1 | Smart Road from Ashoka Circle to Alkola Circle | 26.59 | 25.22 | Work Under Progress |
| 2 | Development of Smart road in package 1, Area between BH road Savalanga Road, Kuvempu road, in Shivamogga City. | 86.57 | 81.09 | Work Under Progress |
| 3 | Area between Jail Road - Kuvempu Road- Savalanga Road - 100' Ring Road and Canal Front Road- Package 2a | 66.61 | 61.56 | Work Under Progress |
| 4 | Area between Jail Road - Kuvempu Road – Sagara Road - Canal Front Road- Package 2b | 100.07 | 95.88 | Work Under Progress |
| 5 | Area between Savalanga Road - 100' Ring Road - Balaraj Urs Road- Package 3a | 58.22 | 54.89 | Work Under Progress |
| 6 | Area between Savalanga Road - Balaraj Urs Road – River Front Road – BH Road – Package 3b | 94.96 | 89.95 | Work Under Progress |
| 7 | Last Mile connectivity using Cycle track and Footpath - Development of Inner Ring Road from Laxmi talkies junction to NT Road (7.5 km) | 90.00 | 84.21 | Work Under Progress |
| 8 | Development of Heritage Walk / Village | 15.60 | 12.91 | Work Under Progress |
| 9 | Development of park near Country Club | 3.70 | 2.97 | Work Under Progress |
| 10 | Development of Masthambika temple park (Park 03) in Shivamogga City | 1.20 | 1.06 | Work Under Progress |
| 11 | Development of Parks Kote Road, Sheshadripuram, Ghandi nagar, DC compound, Mission Compound Park. | 1.73 | 1.68 | Work Under Progress |
| 12 | Development of Parks Malleshwar nagar park, Balrajurs road in shivamogga city | 2.50 | 2.09 | Work Under Progress |
| 13 | Development of Conservancies in Package-1 | 1.37 | 1.33 | Work Under Progress |

| | | | | |
|---|---|---|---|---|
| 14 | Development of Conservancies in Package-2 | 1.85 | 1.55 | Work Under Progress |
| 15 | Development of Conservancies in Package-3 | 4.82 | 4.25 | Work Under Progress |
| 16 | Development of Conservancies in Package-4 | 4.75 | 3.96 | Work Under Progress |
| 17 | Package-5 Redevelopment of Conservancy lanes in Bapuji Nagar, Basavana gudi and Durgi gudi areas in Shivamogga City. | 12.00 | 9.60 | Work Under Progress |
| 18 | Nehru Stadium Beautification | 5.12 | 4.96 | Work Under Progress |
| 19 | Improvement of hole bus stop | 0.75 | 0.68 | Work Under Progress |
| 20 | Canal Redevelopment-Phase-1 (Rs.11.00 Cr) | 11.71 | 10.59 | Work Under Progress |
| 21 | Riverfront Development- Infrastructure works; pedestrian bridge , River front promenade, etc- North Bank | 130.00 | 103.22 | Work Under Progress |
| 22 | Centralized Architecture (DC,DR setup by MSI at KMDS-SDC) | 11.50 | 12.20 | Work Under Progress |
| 23 | Development of Physical Infrastructure( interiors, HVAC, and others) for setting up of Command and control centre | 3.10 | 2.56 | Work Under Progress |
| 24 | Wildlife interpretation centre with science park (Turnkey ) | 10.00 | 8.58 | 4(g) Exempted project.MoA signed with CEE and Work Order Issued on 30.12.2019.Preliminary Report |
| 25 | Conservation of Heritage Building - Govt School adjacent to Karnataka Sanga and other buildings (Turnkey) | 5.00 | 3.58 | 4(g) Exempted project.MoA signed with INTACH and Work Order Issued on 31.12.2019.Preliminary Report is submitted. DPR preparation under |
| 26 | Conservation of Heritage Building - Corporation Main Building (Turn Key) | 3.00 | 2.00 | 4(g) Exempted project.MoA signed with INTACH and Work Order Issued on 30.12.2019.Preliminary Report is |
| 27 | Restoration and Adaptive Re use of Shivappa Nayaka palace Precinct (DBOMT basis-Turnkey project) | 15.50 | 11.68 | Work Order issued on 29.11.2019.Site assessemnt and inception report work is under progress |
| 28 | Supply, Installation, Commissioning and Operation & maintenance of Digital Display Boards | 2.48 | 2.02 | Work Order Issued on 26.12.2019.Site assessment work under progress |
| 29 | Face-lifting to Riverfront Crematorium | 5.00 | 5.13 | LoA Issued on 04.01.20.Survey work |
| 30 | Providing Smart Bus Shelters & E- Toilet for PAN city (61 nos) | 18.50 | 10.80 | LOA issued on 28.01.2020 |
| 31 | Development of Corporation Park (Park 17) in Shivamogga City | 4.40 | 4.40 | LOA Issued on 05.02.2020 |
| 32 | Construction of MLCP with commercial complex | 30.00 | 22.05 | LOA Issued on 10.02.2020 |
| 33 | Street Art in the selected locations across the city | 1.00 | 0.52 | 4(g) exemption approved in Finance Department, GoK.LoA Issued on 12.02.20 |
| | Sub Total - B in Cr= | 829.60 | 739.17 | |

**SCM-Tender Stage**

| S.No. | Name of the work | Cost as per SCP (Rs Cr) | Tender Cost (Rs Cr) | Status |
|---|---|---|---|---|
| 1 | Improvement and Beautification of Private Bus Terminal | 6.00 | 5.40 | Financial bid opened on 28-01-2020 quoted amount 29.06% when compare to CSR . As per the recommendation |
| 2 | Procurement of 100 Nos. of E-Rickshaws | 3.50 | 1.90 | The subject has to be placed before the HPSC for deliberations |
| 3 | Public Bike Sharing(1.5cr SCM+2.9cr PPP) | 1.50 | 1.50 | Financial bid evaluation completed.to be submitted to HPSC for deliberations |
| 4 | Smart Education in Govt Schools - Pan City (35 school) | 15.00 | 8.60 | Bids opened on 17.02.20 and Technical Evlauation is under Progress |

| | | | | |
|---|---|---|---|---|
| 5 | ICT-ICCC and Smart Elements | 46.18 | 46.18 | 2nd Call.Tender called on 27.12.2019.Last date for submission of |
| 6 | Nehru Stadium Existing Sports facility upgradation | 30.00 | 30.00 | Tender called on 11.02.2020 |
| 7 | Modern Police information/ Tourism kiosk | 5.00 | 3.00 | Tender notification issued on 03.02.2020 |
| 8 | Development of Freedom Multi Utility Space and its Partial Implementation | 5.00 | 5.00 | Tender notification issued on 03.02.2020 |
| 9 | Construction of HAWKER'S ZONE with taxi/ auto stand (Integrated bus teminal) | 10.00 | 10.00 | Tender notification issued on 18.02.2020 |
| C | Sub Toatal C in Cr. | 122.18 | 111.58 | |
| | SCM-Projects under DPR Stage | | | |
| S.No | Name of the work | Cost as per SCP (Rs Cr) | Revised Estimated Cost | Status/Remarks |
| | | | | |
| | Grand Total (SCM Projects) | 959.94 | 858.11 | |
| 47 | | | | |
| | PPP Projects-Completed/Work in Progress/Work Order Issued/Tendered/DPR Stage | | | |
| S.No | Name of the work | Cost as per SCP (Rs Cr) | Tentative Estimated Cost (Rs Cr) | Status/Remarks |
| 1 | Design ,Supply, Installation ,Commissioning, Operations and Maintenance of Solar Photovoltaic Systems on Pump House & Roof Tops of Govt. Buildings On Net Metering basis | 3.50 | 1.82 | Revised RFP & PDIA submitted to KUIDFC on 12.02.20 |
| 2 | Conversion of normal street light to LED street light system | 31.69 | 31.69 | Financial evaluation done.To be placed before the board for further deliberations on 18.02.20 |
| 3 | Solar on Canal top (Thunga high level canal) | 182.34 | 182.34 | Revised RFP & PDIA submitted to |
| | Public Bike Sharing(1.5cr SCM+2.9cr PPP) | 2.90 | 2.90 | Financial bid evaluation completed.to |
| | Total= | 220.43 | 218.75 | |
| | Convergence Projects-Completed/Work in Progress/Work Order Issued/Tendered/DPR Stage | | | |
| S.No | Name of the work | Milestone | DPR Cost (Rs Cr) | Status/Remarks |
| 1 | Promoting Floriculture,organic farming and related activities | 10.42 | 10.42 | Work completed by Horticulture Department.Work Completion Date: 21-09-2017 |
| 2 | 24 X 7 water supply | 130.70 | 135.40 | Work in progress |
| 3 | Public Toilets in Shivamogga city using SBM funds | 2.40 | 1.60 | Work Completed |
| 4 | Storm water Drains in Shivamogga using Amrut funds | 8.00 | 8.00 | Work in progress |
| 5 | UG Electrical cabling under Model subdivision scheme of MESCOM | 70.95 | 71.20 | Work in progress |
| 6 | Widening to Four lane divided carriageway to paved shoulder from KM 205 Tumkur-Honnavar section & widening to paved shoulder from KM 522.50 to 525.20 | 70.95 | 70.95 | Work in progress |
| 7 | Providing UGD scheme to Shivamogga City under AMRUT additional grants | 7.00 | 7.00 | Work completed by Date: 17-12-2019 |
| 8 | PKG-35 Additional grants for construction of fruit flower market in corporation site in Garden Area | 1.50 | 1.50 | Work completed by Date: 21-11-2019 |
| 9 | PKG-54 fruit and flower market at city municipal council place at Garden Area | 3.00 | 3.00 | Work completed |

| | | | | | |
|---|---|---|---|---|---|
| | 10 | PKG-55 (1) Improvement of Gopishetty Koppa and sharavathi nagar cemetary | 0.50 | 0.50 | Work completed |
| | 11 | Development of park at alkola circle in Shivamogga | 0.50 | 0.50 | Work completed |
| | 12 | Development of Vinobanagara Professor Park in shivamogga | 0.50 | 0.50 | Work completed |
| | 13 | PKG NEW 2 -Road Iprovement works in CMC Shivamogga in the limits of shivamogga District under Mukyamantri nagarothana Phase-2 projects | 1.45 | 1.45 | Work completed |
| | 14 | PKG 1 : Road Improvement work in CMC Shivamogga in the limits of Shivamogga District under mukyamantri nagarothana Phase-2 projects | 1.71 | 1.71 | Work completed |
| | 15 | Prevention work of flood to Tunga river bed near veerabhadreshwara temple in old mandi,shivamogga | 1.00 | 1.00 | Work completed by Date: 03-11-2017 |
| | 16 | PKG-1 Development of 80 feet road from Shivamogga private bus stand to 100 feet road | 2.00 | 2.00 | Work completed by Date: 26-07-2018 |
| | 17 | PKG-30 construction of Footpath at Shimoga Bus Stand to 100 feet road and 80 feet road divider | 1.50 | 1.50 | Work completed by Date: 26-07-2018 |
| | 18 | PKG-3 Development of road from Vinoba nagar Channel to Police chowki | 2.00 | 2.00 | Work completed by Date: 26-07-2018 |
| | 19 | PKG-40 Development of Median Lighting from tunga bridge to sahyadri College | 1.00 | 1.00 | Work completed by Date: 14-09-2018 |
| | 20 | PKG-41 Development of Conservancies in Park Extension and developing it into Mini markets | 2.00 | 2.00 | Work completed by Date: 26-04-2018 |
| | 21 | PKG-32 24x7 water supply scheme KUWS&DB contribution amount | 6.00 | 6.00 | Work completed by Date: 24-03-2018 |
| | 22 | Green Park and spaces Ward No. 33 | 0.41 | 0.41 | Work completed by Date:07-02-2018 |
| | 23 | Green Park and spaces Shardamma Layout | 0.35 | 0.35 | Work completed by Date:23-06-2018 |
| | 24 | Green Park and Spaces Malleshwara Nagar | 0.35 | 0.35 | Work completed by Date:23-06-2018 |
| | 25 | Green Park and Spaces Gopalgowda Extension in T block | 0.24 | 0.24 | Work completed by Date:23-06-2018 |
| | 26 | Green parks and spaces Development of Gopal Gowda extension A block (Adjacent to KRIDL Office) Park | 0.25 | 0.25 | Work completed by Date:21-06-2017 |
| | 27 | Green parks and spaces Gopal Gowda extension A block | 0.30 | 0.30 | Work completed by Date:08-01-2018 |
| | 28 | Green Park and Spaces Rajendra Nagar | 0.35 | 0.35 | Work completed by Date:14-08-2018 |
| | 29 | Green Park and Spaces Vinobhanagar Professor Park | 0.50 | 0.50 | Work completed by Date:16-11-2018 |
| | 30 | Green Park and Spaces Asoka Circle Park | 0.50 | 0.50 | Work completed by Date:16-11-2018 |
| | 31 | Green Park and spaces Development of Surya Layout and P&T Layout Park | 0.75 | 0.75 | Work completed by Date:19-06-2018 |
| | | Total= | 329.08 | 333.23 | |
| | | Grand Total= | 1410.09 | | |